ಇರುವುದರಿಂದ ಅಧಿಕಾರಿಗಳು ಸಂದರ್ಭಗಳನ್ನು ಉಪಯೋಗಿಸಿಕೊಂಡು ದುರುಪಯೋಗ ಮಾಡುತ್ತಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಆಗುವ ನಷ್ಟವನ್ನು ತಪ್ಪಿಸಲು ಏನು ಕ್ರಮ ಕೈಗೊಂಡಿರುವಿರಿ ಎನ್ನುವ ವಿಷಯವನ್ನು ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಅಧ್ಯಕ್ಷರೆ, ಕುಡಿಯವ ನೀರಿನ ಸಲುವಾಗಿ ಕೊರೆಯಿಸಿದ ಕೊಳವೆಬಾವಿಗಳು ನೀರು ಬಾರದೆ ವಿಫಲವಾದಲ್ಲಿ, ಅಂತಹ ಕೊಳವೆಬಾವಿಗಳಿಗೆ ಅಳವಡಿಸಿದ ಕೇಸಿಂಗ್ ಪೈಪುಗಳನ್ನು ತೆಗೆಯಲು ಸಾಧ್ಯವಾಗುವ ಎಲ್ಲಾ ಪ್ರಕರಣಗಳಲ್ಲೂ ಕೇಸಿಂಗ್ ಪೈಪುಗಳನ್ನು ಹೊರತೆಗೆಸಿ ಪುನಃ ಉಪಯೋಗಿಸಲಾಗುತ್ತಿದೆ.

ತಾಂತ್ರಿಕವಾಗಿ, ಕೆಲವು ವಿಫಲವಾದ ಕೊಳವೆಬಾವಿಗಳಿಂದ ಕೇಸಿಂಗ್ ಪೈಪುಗಳನ್ನು ಹೊರತೆಗೆಯಲು ಸಾಧ್ಯವಾಗುವುದಿಲ್ಲ. ಅಂತಹ ಕೇಸಿಂಗ್ ಪೈಪುಗಳನ್ನು ಹೊರತೆಗೆಯಬೇಕಾದರೆ ಅತ್ಯಂತ ಹೆಚ್ಚಿನ ಹಣ ಮತ್ತು ಸಮಯವು ವ್ಯರ್ಥವಾಗುತ್ತದೆ ಮತ್ತು ಅಂತಹ ಕೇಸಿಂಗ್ ಪೈಪುಗಳನ್ನು ಪುನಃ ಬಳಸಲು ಸೂಕ್ತವಾಗಿರುವುದಿಲ್ಲ.

ಕೇಸಿಂಗ್ ಪೈಪುಗಳನ್ನು ಹೊರತೆಗೆಯಲು ಸಾಧ್ಯವಿಲ್ಲದ ಸಂದರ್ಭಗಳಲ್ಲಿ ಆಯಾಯ ವಿಭಾಗದ ಕಾರ್ಯಪಾಲಕ ಅಭಿಯಂತರುಗಳು ಸ್ಥಳ ತನಿಖೆ ಮಾಡಿ ಅಂತಹ ಕೇಸಿಂಗ್ ಪೈಪುಗಳನ್ನು ಹಾಗೆಯೇ ಬಿಡುವ ಬಗ್ಗೆ ಅದರ ಬೆಲೆಯನ್ನು ಮನ್ನಾ ಮಾಡುವ ಬಗ್ಗೆ ಅಧೀಕ್ಷಕ ಅಭಿಯಂತರವರಿಂದ ದೃಢೀಕರಣ ಪಡೆದುಕೊಳ್ಳುತ್ತಾರೆ.

ಅದೂ ಅಲ್ಲದೆ, ಕೇಸಿಂಗ್ ಪೈಪುಗಳನ್ನು ಹೊರತೆಗೆಯಲು ಸಾಧ್ಯವಾಗುವಂತಹ ಪ್ರಕರಣಗಳಲ್ಲಿಯೂ ಸಹ ಕಾರ್ಯಪಾಲಕ ಅಭಿಯಂತರು ಸ್ಥಳ ತನಿಖೆ ನಡೆಸಿ, ಎಲ್ಲಾ ಕೇಸಿಂಗ್ ಪೈಪುಗಳನ್ನು ಹೊರತೆಗೆಯಲಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳುತ್ತಾರೆ.

ಮೆಲ್ಕಂಡ ಈ ಎಲ್ಲಾ ವಿಷಯಗಳ ಬಗ್ಗೆ ಈಗಾಗಲೇ ಪ್ರಧಾನ ಇಂಜಿನಿಯರ್, ಸಾರ್ವಜನಿಕ ಆರೋಗ್ಯ ತಾಂತ್ರಿಕ ವಲಯ, ಬೆಂಗಳೂರು ಇವರು ಎಲ್ಲಾ ಇಂಜಿನಿಯರಿಂಗ್ ವಿಭಾಗಗಳಿಗೂ ಸುತ್ತೋಲೆಯನ್ನು ಹೊರಡಿಸಿರುತ್ತಾರೆ.

ತುಮಕೂರು ಜಿಲ್ಲೆಯಲ್ಲಿ ವಿಫಲವಾದ ಕೊಳವೆಬಾವಿಗಳಿಂದ ಕೇಸಿಂಗ್ ಪೈಪುಗಳನ್ನು ತೆಗೆದು ಮಾರಾಟ ಮಾಡಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ದಕ್ಷಿಣ ಜಿಲ್ಲೆಯ ಮಾಣಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯಾಧಿಕಾರಿಯನ್ನು ನೇಮಕ ಮಾಡುವ ಕುರಿತು.

ಶ್ರಿ ಡಿ.ವಿ.ಸದಾನಂದಗೌಡ (ಪುತ್ತೂರು):- ಮಾನ್ಯ ಅಧ್ಯಕ್ಷರೆ, ಬಂಟ್ವಾಳ ತಾಲ್ಲೂಕಿನ ಮುಖ್ಯ ಚಟುವಟಿಕೆಯ ಕೇಂದ್ರ ಎನಿಸಿರುವ ಮಾಣಿ ಪೆರ್ನೆ, ಬರಿಮಾರು ಕಡೇ ಶಿವಾಲಯ, ಪೆರಾಜೆ, ಅನಂತವಾಡಿ, ನೇರಳಕಟ್ಟೆ ಸೂರಿಕುವೇರು, ಗಡಿಯಾರ, ಕೆದಿರ,

ಮುಂತಾದ ಗ್ರಾಮಗಳ ಕೇಂದ್ರ ಮಾಣಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯವರು ಉನ್ನತ ವ್ಯಾಸಂಗಕ್ಕೆ ತೆರಳಿದ್ದು, ಪ್ರಕೃತ ವೈದ್ಯಾಧಿಕಾರಿಗಳು ಬಿಟ್ಟದಿಂದ ಸುಮಾರು 20 ಕಿ.ಮೀ. ದೂರದಿಂದ ಬರುತ್ತಿದ್ದು, ದಿನನಿತ್ಯ ಬರುವ ಸುಮಾರು 200ಕ್ಕಿಂತಲೂ ಮಿಕ್ಕ ರೋಗಿಗಳಿಗೆ ತೊಂದರೆಯಾಗುತ್ತಿದ್ದು ಮಲೇರಿಯಾ ಪೀಡಿತವಾದ ಈ ಭಾಗಕ್ಕೆ ತಕ್ಷಣ ವೈದ್ಯಾಧಿಕಾರಿಯನ್ನು ನೇಮಕ ಮಾಡಬೇಕೆಂದು ಮಾನ್ಯ ಆರೋಗ್ಯ ಸಚಿವರನ್ನು ಈ ಮೂಲಕ ಒತ್ತಾಯಪಡಿಸುತ್ತೇನೆ.

ಶ್ರೀ ಪೆಜ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಮಾಣಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ, ಡಾ: ಬಿ.ಎಸ್.ನಾಗಭೂಷಣ ರಾವ್ ಇವರು ಸರ್ಕಾರದ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ: ಆಕುಕ 86 ಎಂಪಿಎಸ್ 96 ದಿನಾಂಕ : 24.5.1996ರ ಪ್ರಕಾರ ಎಂ.ಡಿ. (ಜಿ.ಎಂ) ಸ್ನಾತಕೋತ್ತರ ವ್ಯಾಸಂಗಕ್ಕೆ ಆಯ್ಕೆ ಹೊಂದಿ, ವೈದ್ಯಕೀಯ ಕಾಲೇಜು, ಬಳ್ಳಾರಿಗೆ ತೆರಳಿರುವ ಕಾರಣ ಈ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರ ಹುದ್ದೆಯು ದಿನಾಂಕ : 01.07.1996ರಿಂದ ಖಾಲಿ ಇರುತ್ತದೆ. ಈ ಹುದ್ದೆಗೆ ಪ್ರಾಥಮಿಕ ಆರೋಗ್ಯ ಕೇಂದ್ರ, ವಿಟ್ಲ, ಇಲ್ಲಿನ ವೈದ್ಯಾಧಿಕಾರಿಗಳನ್ನು ಹೆಚ್ಚಿನ ಪ್ರಭಾರದ ಮೇಲೆ ನೇಮಿಸಿ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ. ಈ ಖಾಲಿ ಇರುವ ಹುದ್ದೆಗೆ ಸ್ನಾತಕೋತ್ತರ ವ್ಯಾಸಂಗ ಮುಗಿಸಿ, ನೇಮಕಾತಿಗೆ ಕಾದಿರುವ ವೈಧ್ಯರಲ್ಲಿ ಒಬ್ಬರನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಮಂಗಳೂರಿನಲ್ಲಿರುವ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿಗೆ ಲಿಫ್ಟ್ ಸೌಕರ್ಯ.

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ):- ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿಯು ನೂತನವಾಗಿ ನಿರ್ಮಿಸಿದ್ದು, ಇದರಲ್ಲಿ ಮೂರು ಮಹಡಿಗಳಿರುವುದು. ಕಛೇರಿಯಲ್ಲಿ ತಾಲ್ಲೂಕು ಕಛೇರಿ, ಆಹಾರ ಇಲಾಖಾ ಕಛೇರಿಗಳು, ಚುನಾವಣಾ ಕಛೇರಿ, ಅಸಿಸ್ಟೆಂಟ್ ಕಮೀಷನರ್ ಕಛೇರಿ, ಕಂದಾಯ ಇಲಾಖೆಯ ಇತರ ವಿವಿಧ ಕಛೇರಿಗಳು ಇದ್ದು, ಶ್ರೀಸಾಮಾನ್ಯರು ದಿನವಹಿ ಭೇಟಿ ಮಾಡಬೇಕಾದ ಹಲವಾರು ಸರಕಾರಿ ಕಛೇರಿಗಳಿವೆ. ಜಿಲ್ಲಾಧಿಕಾರಿಗಳ ಕಛೇರಿ, ಮೂರನೆ ಮಹಡಿಯಲ್ಲಿರುವುದು. ದಿನ ನಿತ್ಯ ಜಿಲ್ಲೆಯ ದೂರ ದೂರದ ಊರುಗಳಿಂದ ಸಾವಿರಾರು ಜನರು ವಿಶೇಷವಾಗಿ ವೃದ್ಧರು, ಮಹಿಳೆಯರು, ಅಂಗವಿಕಲರು, ಅನಾರೋಗ್ಯ ಪೀಡಿತ ಜನರು, ದಿನನಿತ್ಯ ಅಥವಾ ದಿನದಲ್ಲಿ ಹಲವಾರು ಬಾರಿ ಈ ಕಛೇರಿಗಳಲ್ಲಿ ಅಲೆದಾಡುವ ಸಂದರ್ಭಗಳಲ್ಲಿ ಮಹಡಿಗಳನ್ನು ಏರುವಲ್ಲಿ ತೊಂದರೆಯನ್ನು ಅನುಭವಿಸುತ್ತಿರುವರು. ಅಕಸ್ಮಾತ್ ಎದುರಿಗೆ ಜನಪ್ರತಿನಿಧಿಗಳು, ವಿಶೇಷವಾಗಿ ಶಾಸಕರು ಸಿಕ್ಕಿದಾಗ ತಮ್ಮ ಸಮಸ್ಯೆಗಳನ್ನು ಮತ್ತು ತೊಂದರೆಗಳನ್ನು ಆಗ್ರಹಪೂರ್ವಕವಾಗಿ ವಿನಂತಿಸುತ್ತಿರುವರು. ಆದುದರಿಂದ ಮಂಗಳೂರಿನಲ್ಲಿರುವ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿಗೆ ಒಂದು ಲಿಫ್ಟ್